# ಪೇಚಿಗೆ ಸಿಲುಕಿಸಿದ ಡಿ.ಎಲ್.

ಕೀನ್ಯಾದಿಂದ ವಿದ್ಯಾಭ್ಯಾಸಕ್ಕೆಂದು ಮೈಸೂರಿಗೆ ಬಂದಿರುವ ಕಟನ ಜೋಸೆಫ್ ಅವರನ್ನು ಒಮ್ಮೆ ಟ್ರಾಫಿಕ್ ಪೊಲೀಸರು ನಿಲ್ಲಿಸಿ ಚಾಲನಾ ಪರವಾನಗಿ (ಡಿ.ಎಲ್) ಎಲ್ಲಿ ಎಂದು ಪ್ರಶ್ನಿಸಿದರಂತೆ. ಅವರ ಬಳಿ ಇದ್ದ ಅಂತರರಾಷ್ಟ್ರೀಯ ಡಿ.ಎಲ್ ತೋರಿಸಿದರೂ ಪೊಲೀಸರು 'ಇದು ಡಿಎಲ್ ಅಲ್ಲ' ಎಂದು ಫೈನ್ ಹಾಕಲು ಮುಂದಾದರಂತೆ. 'ಇಂಗ್ಲಿಷ್‌ನಲ್ಲಿ ಎಷ್ಟು ಹೇಳಿದರೂ ಪೊಲೀಸರಿಗೆ ಅರ್ಥವಾಗಲಿಲ್ಲ. ಆಗ ನಿಜಕ್ಕೂ ಪೇಚಿಗೆ ಸಿಲುಕಿದ್ದೆ' ಎಂದು ಭಾಷೆಯ ತೊಡಕಿನಿಂದ ಉಂಟಾದ ಡಿ.ಎಲ್ ಪ್ರಸಂಗವನ್ನು ನೆನಪಿಸಿಕೊಂಡ ಜೋಸೆಫ್, 'ಸಂವಹನಕ್ಕಾದರೂ ಇಂಗ್ಲಿಷ್ ಭಾಷೆಯನ್ನು ಎಲ್ಲರೂ ಕಲಿಯಬೇಕು. ನಮಗೂ ಇಂಗ್ಲಿಷ್ ಜ್ಞಾನ ಕಡಿಮೆ' ಎಂದು ನಕ್ಕರು.

ಭಾರತವು ವಿದೇಶಿಗರಿಗೆ ವಿಭಿನ್ನ ಅನುಭವ ನೀಡುತ್ತದೆ. ಕೆಲವರಿಗೆ ಖುಷಿ ನೀಡಿದರೆ ಮತ್ತೆ ಕೆಲವರಿಗೆ ಕಹಿ ಅನುಭವ. ಮಗದೊಬ್ಬರಿಗೆ ಮಿಶ್ರ ಅನುಭವ. ಜೋಸೆಫ್ ಅವರದ್ದು ಖುಷಿ– ಕಹಿಗಳ ಅನುಭವ.

'ಕಪ್ಪು ಜನರೆಂದರೆ ಕೆಲ ಭಾರತೀಯರು ಶತ್ರುಗಳಂತೆ ನೋಡುತ್ತಾರೆ. ನಮ್ಮನ್ನು ಮಾತನಾಡಿಸಲೂ ಹಿಂಜರಿಯುತ್ತಾರೆ' ಎನ್ನುತ್ತ, ಇಲ್ಲಾದ ಕಹಿ ಘಟನೆಯನ್ನು ಹಂಚಿಕೊಂಡರು ಜೋಸೆಫ್. ಒಮ್ಮೆ ಅವರು ತಮ್ಮ ಸ್ನೇಹಿತನೊಂದಿಗೆ ಬೈಕ್‌ನಲ್ಲಿ ಹೋಗುತ್ತಿರುವಾಗ ಸಣ್ಣ ಅಪಘಾತವಾಗಿ ಸ್ನೇಹಿತ ಗಂಭೀರವಾಗಿ ಗಾಯಗೊಂಡರು. ಆತನನ್ನು ಆಸ್ಪತ್ರೆಗೆ ಸೇರಿಸಲು ಯಾರೂ ಸಹಾಯಕ್ಕೆ ಬರಲಿಲ್ಲ. ಬದಲಾಗಿ ಅವರನ್ನೇ ದೂಷಿಸಿದರು. ಸುತ್ತುಮುತ್ತಲ ಜನ ನೋಡಿಕೊಂಡು ಸುಮ್ಮನೇ ಹೋದರು. ಇದು ಅವರಿಗೆ ಸಹಿಸಲಾಗದ ಕಹಿ ಘಟನೆಯಾಗಿ ಉಳಿದಿದೆ.

ಒಮ್ಮೆ ಬೆಂಗಳೂರಿಗೆ ಬಸ್‌ನಲ್ಲಿ ಹೋಗುವಾಗ ಜೋಸೆಫ್ ಅವರನ್ನು ಪ್ರಯಾಣಿಕರೊಬ್ಬರು, 'ನೀವೇಕೆ ಇಲ್ಲಿ ಓದಲು ಬಂದಿದ್ದೀರಿ. ನಿಮ್ಮ ದೇಶದಲ್ಲಿ ಕಾಲೇಜುಗಳು ಇಲ್ಲವೆ?' ಎಂದು ವ್ಯಂಗ್ಯವಾಗಿ ಪ್ರಶ್ನಿಸಿದ್ದರಂತೆ.

ಮೂರು ವರ್ಷಗಳಿಂದ ಮೈಸೂರಿನಲ್ಲಿ ಕಾನೂನು ಪದವಿ ವ್ಯಾಸಂಗ ಮಾಡುತ್ತಿರುವ ಜೋಸೆಫ್, ಭಾರತೀಯರು ಸಂಸ್ಕೃತಿಗೆ ಬೆಲೆ ಕೊಡುವುದನ್ನು ಕಂಡು ಅಚ್ಚರಿಗೊಂಡಿದ್ದಾರೆ. 'ಕೀನ್ಯಾದಲ್ಲೂ ವಿವಿಧ ಧರ್ಮಗಳು ಮೇಳೈಸಿವೆ. ಆದರೆ ಅಲ್ಲಿ ಪಾಶ್ಚಿಮಾತ್ಯರ ಪ್ರಭಾವ ಹೆಚ್ಚಾಗಿದೆ. ಬೇರೆ ಬೇರೆ ದೇಶಗಳಿಂದ ಬಂದವರು ನಮ್ಮತನವನ್ನು ಕಿತ್ತುಕೊಂಡಿದ್ದಾರೆ. ಆದರೆ ಇಲ್ಲಿ ಪಾಶ್ಚಿಮಾತ್ಯರ ಪ್ರಭಾವ ಇದ್ದರೂ ಆಚಾರ– ವಿಚಾರಗಳು, ಸಂಸ್ಕೃತಿ ಪ್ರತಿಯೊಬ್ಬರಲ್ಲೂ ಬೇರೂರಿದೆ' ಎನ್ನುತ್ತಾರೆ ಜೋಸೆಫ್.

ಇಲ್ಲಿನ ಹಬ್ಬದ ಆಚರಣೆಗಳೂ ಜೋಸೆಫ್ ಅವರನ್ನು ಬಹುವಾಗಿ ಕಾಡಿವೆ. ದಸರಾ ಹೆಚ್ಚು ಇಷ್ಟವಾಗಿದೆ. ಜಂಬೂಸವಾರಿಯನ್ನು ನೋಡಿ ಆನಂದಿಸಿದ್ದಾರೆ. ಇಲ್ಲಿಯ ರೀತಿ ಕೀನ್ಯಾದಲ್ಲಿ ಆನೆಗಳು ನೋಡಲು ಸಿಗುವುದು ಅಪರೂಪ. ಹಾಗಾಗಿ ಆನೆಗಳ ನಡಿಗೆ ಅವರನ್ನು ಆಕರ್ಷಿಸಿದೆ.

### ಅಲ್ಲಿ ವಧು ದಕ್ಷಿಣೆ

ಮದುವೆಯ ಸಂದರ್ಭದಲ್ಲಿ ವಧುವಿನ ಕಡೆಯವರು ವರದಕ್ಷಿಣೆ ಕೊಡುವ ಪದ್ಧತಿ ಭಾರತದಲ್ಲಿ ಬೇರೂರಿದೆ. ಆದರೆ ಕೀನ್ಯಾದಲ್ಲಿ ವಧುದಕ್ಷಿಣೆ ಕೊಡುವ ಪದ್ಧತಿ ಜಾರಿಯಲ್ಲಿದೆ. ಮದುವೆಗೂ ಮೊದಲೇ ವಧುವಿಗೆ ಇಂತಿಷ್ಟು ಹಣ, ಒಡವೆ, ಜಮೀನು ಏನೂ ಬೇಕಾದರೂ ಕೊಡಬಹುದು. ಅದು ಅವರ ಆರ್ಥಿಕ ಸ್ಥಿತಿಗತಿಗೆ ಅನುಗುಣವಾಗಿ. ಆದರೆ 'ಇಲ್ಲಿಯ ರೀತಿ ವರದಕ್ಷಿಣೆಗಾಗಿ ನಡೆಯುವ ದೌರ್ಜನ್ಯಗಳು ನಮ್ಮಲ್ಲಿ ಇಲ್ಲ' ಎನ್ನುತ್ತಾರೆ ಜೋಸೆಫ್.


ಕೀನ್ಯಾದಿಂದ ಬಂದ ಕಟನ ಜೋಸೆಫ್

ಜೋಸೆಫ್ ಅವರಿಗೆ ಇಲ್ಲಿನ ಶಿಕ್ಷಣ ಪದ್ಧತಿ ಹೆಚ್ಚು ಇಷ್ಟವಾಗಿದೆ. 'ಕೀನ್ಯಾದಲ್ಲಿ ದಿನದಲ್ಲಿ ಮೂರು ಗಂಟೆ ತರಗತಿಗಳಿಗೆ ಹೋದರೆ ಸಾಕು. ಕೆಲ ವೇಳೆ ಹೋಗದಿದ್ದರೂ ನಡೆಯುತ್ತದೆ. ಅಲ್ಲದೆ ಅಲ್ಲಿ ಉಪನ್ಯಾಸಕರು ತಿಂಗಳಿಗೆ ಒಮ್ಮೆ ಕಾಲೇಜಿಗೆ ಹಾಜರಿ ಹಾಕುತ್ತಾರೆ. ಅಧ್ಯಯನದ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಉಂಟಾಗುವ ಸಮಸ್ಯೆಗಳಿಗೆ ಆನ್‌ಲೈನ್‌ನಲ್ಲೇ ಪರಿಹಾರ ತಿಳಿಸುತ್ತಾರೆ. ಇಲ್ಲಿ ಹಾಗಲ್ಲ. ವಿದ್ಯಾರ್ಥಿಗಳ ಪ್ರತಿ ಹಂತದಲ್ಲೂ ಶಿಕ್ಷಕರು ಜತೆಗಿರುತ್ತಾರೆ. ವಿದ್ಯಾರ್ಥಿ– ಶಿಕ್ಷಕರ ನಡುವಿನ ಅಂತರ ಕಡಿಮೆ. ನಮ್ಮಲ್ಲೂ ಅವರೊಬ್ಬರಾಗಿ ಪಾಠ ಮಾಡುತ್ತಾರೆ. ಆ ಬಗೆಯ ಸ್ನೇಹಪರತೆಯ ವಾತಾವರಣ ಸೃಷ್ಟಿಯಾದಾಗ ವಿದ್ಯಾರ್ಥಿಗಳಲ್ಲೂ ಕಲಿಕೆಯಲ್ಲಿ ಆಸಕ್ತಿ ಮೂಡುತ್ತದೆ' ಎನ್ನುತ್ತಾರೆ ಜೋಸೇಫ್.

ತಮಿಳುನಾಡು, ಗೋವಾ, ಮಹಾರಾಷ್ಟ್ರ, ಕರ್ನಾಟಕ ಮೂರು ರಾಜ್ಯಗಳನ್ನು ಸುತ್ತಿರುವ ಜೋಸೆಫ್ ಅವರಿಗೆ ಬೆಂಗಳೂರು ಬಹಳ ಇಷ್ಟವಾಗಿದೆ. ಅಲ್ಲಿನ ಮೆಟ್ರೊ ಟ್ರೈನ್‌ನಲ್ಲಿ ಓಡಾಡಿರುವ ಅವರಿಗೆ ಟ್ರಾಫಿಕ್ ಸಮಸ್ಯೆ ಅಷ್ಟಾಗಿ ಕಾಡಿಲ್ಲವಂತೆ. ಬಿಡುವಿನ ಸಮಯದಲ್ಲಿ ಪ್ರಯಾಣ ಮಾಡುವುದು, ಟ್ರೆಕ್ಕಿಂಗ್ ಇವರ ನೆಚ್ಚಿನ ಹವ್ಯಾಸಗಳು. ಚಾಮುಂಡಿ ಬೆಟ್ಟದ ಮೆಟ್ಟಿಲುಗಳನ್ನು ಏರಿ ಪುಳಕಿತಗೊಂಡಿದ್ದಾರೆ. 'ಮೆಟ್ಟಿಲು ಹತ್ತುವಾಗ ಕೋತಿಗಳು ನಮ್ಮನ್ನೇ ರೇಗಿಸುತ್ತವೆ. ಭಾರತದಲ್ಲಿ ಪ್ರಾಣಿಗಳಿಗೂ ಬಹಳ ಬುದ್ಧಿವಂತಿಕೆ ಇದೆ' ಎಂದು ನಗುತ್ತಾರೆ.

ಇಲ್ಲಿನ ಬಿರಿಯಾನಿ, ಕೀನ್ಯಾದ ಚಪಾತಿ ಅವರ ಅಚ್ಚುಮೆಚ್ಚಿನ ತಿನಿಸು. 'ಇಲ್ಲಿಯೂ ಚಪಾತಿ ಮಾಡುತ್ತಾರೆ. ಆದರೆ ಇಲ್ಲಿ ತುಂಬಾ ತೆಳ್ಳಗಿರುತ್ತವೆ. ಕೀನ್ಯಾದಲ್ಲಿನ ದಪ್ಪನೇ ಚಪಾತಿ ನೆನೆಸಿಕೊಂಡರೆ ಬಾಯಲ್ಲಿ ನೀರೂರುತ್ತದೆ' ಎಂದು ಮುಗುಳ್ನಗುತ್ತಾರೆ ಜೋಸೆಫ್.

■ ಸುಮಾ ಬಿ